**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊನ್ನಾವರ**

**ಫೌಜುದಾರಿ ಪ್ರಕರಣ ಸಂಖ್ಯೆ : 96/2020**

**ಚಾ.ಸಾಃ 2, ಫ್ರಾ.ಸಾಃ 2**

| | |
|---|---|
| ಸಾಕ್ಷಿದಾರನ ಹೆಸರು | ಅಬ್ದುಲ್ ಕರೀಮ್ |
| ತಂದೆಯ ಹೆಸರು | ಲಿಯಾಕತ್ ಅಲಿ |
| ವಯಸ್ಸು | 49 ವರ್ಷಗಳು |
| ಉದ್ಯೋಗ | ಪಾತ್ರೆ ಅಂಗಡಿ |
| ವಾಸ್ತವ್ಯ | ಚಂದಾವರ |

**ಸಾಕ್ಷಿಯನ್ನು ದಿನಾಂಕಃ 08-09-2022 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎಪಿಪಿಯವರಿಂದ,**

ಸಾಕ್ಷಿಗೆ ಈ ಪ್ರಕರಣದ ನಿಪಿ-2 ಗುನ್ನೆ ಜಾಗೆ ಪಂಚನಾಮೆಯನ್ನು ತೋರಿಸಲಾಗಿ ಅದರ ಮೇಲಿನ ಒಂದು ಸಹಿಯನ್ನು ಸಾಕ್ಷಿ ತನ್ನದು ಎಂದು ತಿಳಿಸಿದ್ದರಿಂದ ನಿಪಿ-2ರ ಮೇಲಿನ ಸಾಕ್ಷಿ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಗೆ ನಿಪಿ-3 ಛಾಯಾಚಿತ್ರವನ್ನು ತೋರಿಸಲಾಗಿ ಅದರಲ್ಲಿ ತನ್ನ ಇರುವಿಕೆಯನ್ನು ಒಪ್ಪಿಕೊಂಡಿರುತ್ತಾರೆ.

ಸದರಿ ನಿಪಿ-2ರ ಮೇಲಿನ ಸಹಿಯನ್ನು ನಾನು ದಿನಾಂಕ 01-10-2019ರಂದು ಚಾಸಾ-1ರವರ ಮನೆಯಲ್ಲಿ ಕಳ್ಳತನವಾಗಿದ್ದಕ್ಕೆ ಸಂಬಂಧಿದಂತೆ ಪೋಲಿಸರು ಬಂದಾಗ ಮಾಡಿರುತ್ತೇನೆ. ಆ ಸಂದರ್ಭದಲ್ಲಿ ಚಾಸಾ-3 ಹಾಜರಿದ್ದು ಸ್ಥಳವನ್ನು ಚಾಸಾ-1 ತೋರಿಸಿರುತ್ತಾರೆ. ಪೋಲಿಸರು ಪಂಚನಾಮೆ ಮಾಡಿ ನನ್ನ ಸಹಿ ಪಡೆದಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ವಿಠ್ಠಲ ಎಂ. ಭಂಡಾರಿಯವರಿಂದಃ**

ಚಾಸಾ-1 ನನ್ನ ದಾಯಾದಿ ಅಣ್ಣನ ಮಗಳು. ಪಿರ್ಯಾದನ್ನು ನೀಡುವ ಸಂದರ್ಭದಲ್ಲಿ ನಾನು ಚಾಸಾ-1ರವರ ಜೊತೆ ಹೊನ್ನಾವರಕ್ಕೆ ಬಂದಿದ್ದೇನೆ ಎಂದರೆ ಸರಿಯಲ್ಲ. ನಿಪಿ-2ರಲ್ಲಿ ಬರೆದಿರುವ ಎಲ್ಲಾ ಅಂಶಗಳ ಬಗ್ಗೆ ನನಗೆ ಗೊತ್ತಿಲ್ಲ. ನಿಪಿ-3ನ್ನು ಚಾಸಾ-1ರವರ ಮನೆಯಲ್ಲಿ ತೆಗೆಸಿಲ್ಲ ಎಂದರೆ ಸರಿಯಲ್ಲ. ಚಾಸಾ-1ರವರ ಮನೆಯಲ್ಲಿ ಕಳ್ಳತನ ಆಗಿರಲಿಲ್ಲ ಮತ್ತು ಪೋಲಿಸರು ಅಲ್ಲಿಗೆ ಬಂದು ಪಂಚನಾಮೆ

ಮಾಡಿಲ್ಲ ಎಂದರೆ ಸರಿಯಲ್ಲ. ಚಾಸಾ–1 ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆಃ ಇರುವುದಿಲ್ಲ.</u>**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**